

# ಶಿಕ್ಷಕಿಯಲ್ಲ ಈಗಲೂ ನಾನು ವಿದ್ಯಾರ್ಥಿ....

ಕ್ಲಾಸ್, ಎಕ್ಸಾಂ, ಅಸೈನ್‌ಮೆಂಟ್, ಗದರುವ ಶಿಕ್ಷಕರು, ಅಂಬುತ್ತರೇ ಗೆಳತಿಯರೊಂದಿಗೆ ತುಂಟಾಟ ಆಡಿದ ಕ್ಯಾಂಪಸ್.. ಅದ್ಯಾ ನೆನೆಸಿಕೊಂಡರೆ ಎಲ್ಲವೂ ಇಷ್ಟು ಬೇಗ ಮುಗಿದೋಯ್ತು ಮತ್ತೊಮ್ಮೆ ಆ ಅನುಭವ ಸಿಗುತ್ತಾ ಎಂದು ಎಷ್ಟೋ ಸಲ ಮನಸ್ಸಿನಲ್ಲೇ ವಿಚಾರಗಳು ಸುಳಿದು ಹೋಗಿವೆ...

ಹೌದು ಸ್ಟುಡೆಂಟ್ ಲೈಫ್ ಇಸ್ ಗೋಲ್ಡನ್ ಲೈಫ್ ಎಂಬ ವಾಕ್ಯದಂತೆ ಆ ದಿನಗಳು ಮಜಾನೇ ಬೇರೆ. ಏನು ಇಲ್ಲದ ಭೇದ ಭಾವ ಗೊತ್ತಿಲ್ಲದ ದಿನಗಳಲ್ಲಿ ಎಲ್ಲವೂ ಇದ್ದಂತೆ ಕಾಲೇಜಿನಲ್ಲಿ ಗೆಳೆಯ ಗೆಳತಿಯರೊಂದಿಗೆ ಕಳೆದ ಅನುಭವ ಯಾವ ಐಶ್ವರ್ಯದಿಂದಲೂ ಸಿಗುವುದಿಲ್ಲ.. ಮತ್ತೆ ಆ ದಿನಗಳು ಮರಳಿ ಸಿಗುವುದಿಲ್ಲ ಎಂದುಕೊಂಡಾಗ ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತಾಕಿದಂತೆ ಅಂತಹ ಅವಕಾಶವೊಂದು ನನಗೆ ಸಿಕ್ಕಿದ್ದು ಅದೃಷ್ಟವೋ ಏನೋ.. ಅದೇ ಕ್ಯಾಂಪಸ್, ಶಿಕ್ಷಕರು, ತರಗತಿಗಳು... ಎಲ್ಲವೂ ಮರಳಿ ಸಿಕ್ಕಿವೆ.. ಸದ್ದ ಹಳೆಯ ನೆನಪುಗಳಿಗೆ ಮತ್ತೆ ರೆಕ್ಕೆ ಬಂದು ಒಂದು ಕ್ಷಣ ಮನ ಉತ್ಸಾಹದಲ್ಲಿ ತೇಲಾಡಿದೆ..

ಚಿಕ್ಕವಳಾಗಿದ್ದಾಗ ಬಿ.ಎಲ್.ಡಿ.ಈ ಸಂಸ್ಥೆಯ ಎಸ್.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ ನೋಡಿದಾಗಲೊಮ್ಮೆ ನನ್ನ ಮನಸ್ಸು ಕಲಿತರೆ ಇಲ್ಲಿ ಕಲಿಯಬೇಕು ಎಂದು ಒಳಗೊಳಗೆ ಲೆಕ್ಕಚಾರ ಹಾಕಿದ್ದುಂಟು.. ಆದರೆ ಅಷ್ಟು ದೊಡ್ಡ ಕಾಲೇಜಿನಲ್ಲಿ ಸೀಟ್ ಸಿಗುವುದು ಕೂಡ ಕಷ್ಟದ ಮಾತೆ ಎಂದು ಆಡಿಕೊಳ್ಳುವವರನ್ನು ನೋಡಿ ಸುಮ್ಮನಾಗಿದ್ದೆ.. ಮುಂದೆ ಬಿಎ ಮಾಡಲು ಅದೇ ಕಾಲೇಜಿನಲ್ಲಿ ಪ್ರವೇಶ ಸಿಕ್ಕಿದ್ದು ನನಗೆ ಗೋಲ್ಡ್ ಮೆಡಲ್ ಪಡೆದ [illegible]ವಾದ

*ಮಕ್ಕಳಾಗಿ ಕಲಿಯುವುದು ಎಷ್ಟು ಚಂದವೋ ಅಷ್ಟೇ ಗುರುವಾಗಿ ಕಲಿಸೋದೋ ಅಷ್ಟೇ ಅಂದವಾಗಿದೆ. ಸ್ಟುಡೆಂಟ್ ಲೈಫ್ ಇಸ್ ಗೋಲ್ಡನ್ ಲೈಫ್ ಅಂತಾರೆ ಆದರೆ ಟೀಚರ್ಸ್ ಲೈಫ್ ಇಸ್ ಡೈಮಂಡ್ ಲೈಫ್. ಸಾವಿರಾರು ಕಲ್ಲುಗಳನ್ನು ಸುಂದರವಾದ ಮೂರ್ತಿ ಮಾಡುವ ಬ್ರಹ್ಮ ಶಿಕ್ಷಕ.*

ನನಗೆ ಮೊದಮೊದಲು ಎಲ್ಲವೂ ಹಿಂಜರಿಕೆ, ಭಯ. ಸ್ವಲ್ಪ ದಿನ ಕಳೆದ ಮೇಲೆ ನಮ್ಮ ಹವಾ ಅನ್ನೋ ಹಾಗೆ ತುಂಟಾಟ ಆಡಿದ್ದು, ಬಿಟ್ಟರೆ ಓದಿನಲ್ಲೂ ನಾವೇ ಮುಂದು ಎನ್ನುವಂತೆ ಕಾಲೇಜಿನಲ್ಲಿ ಗುರುತಿಸಿಕೊಂಡಿದ್ದರಿಂದ ಸ್ವಲ್ಪ ಕೆಲ ಎತ್ತಿ ನಡೆಯುವಂತಾಗಿತ್ತು.. ಅದರಲ್ಲೂ ಪತ್ರಿಕೋದ್ಯಮ ವಿಷಯ ಆಯ್ದುಕೊಂಡ ನಾವು ಎಲ್ಲರಿಗಿಂತ ಭಿನ್ನ... ಎಲ್ಲ ವಿಭಾಗದಲ್ಲೂ ವಿದ್ಯಾರ್ಥಿ ಗಳಿಗಿಂತ ಭಿನ್ನ ದಾರಿ... ಅಗೋ ಹೀಗೋ ಕಾಲೇಜಿಗೆ ಟಾಪರ್ ಆಗಿ ಶಿಕ್ಷಕರ ನೆಚ್ಚಿನ ವಿದ್ಯಾರ್ಥಿಯಾಗಿದ್ದ ಕ್ಷಣದಲ್ಲಿ ಮನಸ್ಸು ಮತ್ತೆ ಕತ್ತಲೆಗೆ ದೂಡಿದ ಅನುಭವ.. ಹೌದು ಮೂರು ವರ್ಷ ಜೊತೆಗಿದ್ದ ಸ್ನೇಹಿತರು, ಶಿಕ್ಷಕರು, ಕಾಲೇಜು ಎಲ್ಲವೂ ಇನ್ನು ಮೇಲೆ ಜೊತೆಯಿರಲ್ಲ ಎಂಬುದು ಸಿಡಿಲು ಬಡಿದ್ದಂತಾದರೂ ಮುಂದಿನ ದಾರಿಯೊಂದು ಕೈ ಬೀಸಿ ಕರೆದಿತ್ತು...

ಎಲ್ಲ ಸ್ನೇಹಿತರು ಅವರ ಅವರ ಇಚ್ಛೆಯ ವಿಷಯಗಳನ್ನು ಆಯ್ಕೆ ಮಾಡಿ ಬೇರೆ ಬೇರೆ ಉನ್ನತ ವ್ಯಾಸಂಗಕ್ಕೆ ಹೋದರು. ನಾನು ಕೂಡಾ ಪತ್ರಿಕೋದ್ಯಮ ವಿಷಯವನ್ನು ಆಯ್ಕೆ ಮಾಡಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಪಡೆದು ಎರಡು ವರ್ಷ ಮುಗಿಸಿ, ಭಯದಿಂದಲೇ ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಕಚೇರಿಯತ್ತ ತರಬೇತಿಗೆ ದಾಪುಗಾಲು ಇಟ್ಟಿದ್ದೆ, ಅದಾದ ಮೇಲೆ ಕುಟುಂಬದಂತಿರುವ ಸಂಯುಕ್ತ ಕರ್ನಾಟಕದಲ್ಲಿ ಮನೆಯ ಮಗಳ ತರಹ ಪ್ರತಿಯೊಂದು ವಿಷಯ ಕಲಿತುಕೊಂಡೆ, ಸಂಪಾದಕೀಯ, ವರದಿಗಾರ ವಿಭಾಗದಿಂದ ಎಲ್ಲ ಗುರುಗಳು ನನಗೆ ಬಹಳಷ್ಟು ಪ್ರೇರಣೆ ನೀಡಿದರು.

ಇಲ್ಲಿಂದ ನನಗೆ ಟರ್ನಿಂಗ್ ಪಾಯಿಂಟ್ ಎಂಬಂತೆ ಅಚ್ಚರಿಯಾದರು ನಂಬಲೇಬೇಕು ಎನ್ನುವಂತೆ ಕಲಿತ ಕಾಲೇಜಿಗೆ ಶಿಕ್ಷಕಿಯಾಗಿ ಆಯ್ಕೆಯಾಗಿದ್ದೀರಿ ಎಂಬ ಕಾಲೇಜಿನ ಪ್ರಾಂಶುಪಾಲ ಕೆ.ಜಿ. ಪೂಜಾರಿ ಗುರುಗಳಿಂದ ಕರೆ ಬಂದರೂ ನನ್ನನ್ನೇ ನಾನು ಒಂದು ಕ್ಷಣ ಪರೀಕ್ಷೆ ಮಾಡಿಕೊಂಡಿದ್ದೆ. ಹೌದು ಮತ್ತದೆ ಅದೇ ಅವರದ್ದೆ ಧ್ವನಿ.. ಬಿ.ಎಲ್.ಡಿ.ಈ ಕಾಲೇಜಿಗೆ ನೀವು ಪತ್ರಿಕೋದ್ಯಮದ ಶಿಕ್ಷಕಿ ಆಗಿ ಬರಬೇಕು ಅಂದಾಗ ಮನದಲ್ಲೆ ಕುಣಿದಾಡಿದ್ದೆ...

ವಿದ್ಯಾರ್ಥಿನಿಯಾಗಿ ಕಾಲೇಜಿನಿಂದ ಹೊರಗೆ ಬರುವಾಗ ಎಷ್ಟು ದುಃಖವಿತ್ತೋ, ಅದಕ್ಕಿಂತ ಹೆಚ್ಚು ಖುಷಿ ಶಿಕ್ಷಕಿಯಾಗಿ ಮತ್ತೆ ಕಾಲೇಜಿಗೆ ಬಂದ ಮೇಲೆ ಸಿಕ್ಕಿತ್ತು.. ಆದರೆ ಮೊದಲ ದಿನ ನನಗೆ ನಾನು ಇಲ್ಲಿ ವಿದ್ಯಾರ್ಥಿಯೋ ಶಿಕ್ಷಕಿಯೋ ಎಂಬ ಗೊಂದಲದಲ್ಲೆ ಕಳೆಯಬೇಕಾಯಿತು. ಏಕೆಂದರೆ ಮನಸ್ಸು ಇನ್ನೂ ಹಳೆಯ ದಿನದಿಂದ ಹೊರಗೆ ಬಂದಿಲ್ಲ. ಮುಜುಗರದಿಂದಲೇ ಎರಡನೇ ದಿನವೇ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ನನ್ನ ಗುರುಗಳೊಂದಿಗೆ ನಾನು ಶಿಕ್ಷಕಿಯಾಗಿ ಕುಳಿತಿದ್ದೆ, ಅದ್ಯಾ ಹೆಮ್ಮೆಯ ವಿಷಯವಾದರೂ ನಾನು ಮಾತ್ರ ಇನ್ನೂ ವಿದ್ಯಾರ್ಥಿಯಾಗಿದ್ದೆ ಏಕೆಂದರೆ ಕಲಿಸಿದ ಗುರುಗಳು ಎದುರು ನಾವೆಷ್ಟೆ ಎತ್ತರದಲ್ಲಿದ್ದರೂ ಅವರು ನಮ್ಮ ಮನದಲ್ಲಿ ಎತ್ತರದಲ್ಲೆ ಇರುತ್ತಾರೆ ಇರಬೇಕು....

ವಿದ್ಯಾರ್ಥಿಯಾಗಿದ್ದ ಶಿಕ್ಷಣಿಗೆ ಗೋಳು ಹೊಯ್ಯುಂಡ ಆ ದಿನ ಈಗ ಮತ್ತೆ ಮರಳಿದೆ. ಆದರೆ ಒಂದು ವ್ಯತ್ಯಾಸ ಈಗ ವಿದ್ಯಾರ್ಥಿಯ ಪಾತ್ರವಲ್ಲ ಶಿಕ್ಷಕಿಯ ಪಾತ್ರ.. ಒಂದಂತೂ ಸತ್ಯ ಜೀವನವೊಂದು ಚಕ್ರ.. ನಾವು ಏನು ಮಾಡುತ್ತವೆಯೋ ಅದು ಮತ್ತೆ ಮರಳಿ ನಮಗೆ ಕೊಡುತ್ತೆ ಎನ್ನುವುದರಲ್ಲಿ ನೂರಕ್ಕೆ ನೂರು ಸತ್ಯವಿದೆ...

ಮಕ್ಕಳಾಗಿ ಕಲಿಯುವುದು ಎಷ್ಟು ಚಂದವೋ ಅಷ್ಟೇ ಗುರುವಾಗಿ ಕಲಿಸೋದೋ ಅಷ್ಟೇ ಅಂದವಾಗಿದೆ.. ಸ್ಟುಡೆಂಟ್ ಲೈಫ್ ಇಸ್ ಗೋಲ್ಡನ್ ಲೈಫ್ ಅಂತಾರೆ ಆದರೆ ಟೀಚರ್ ಲೈಫ್ ಇಸ್ ಡೈಮಂಡ್ ಲೈಫ್.. ಸಾವಿರಾರು ಕಲ್ಲುಗಳನ್ನು ಸುಂದರವಾದ ಮೂರ್ತಿ ಮಾಡುವ ಬ್ರಹ್ಮ ಶಿಕ್ಷಕ..

ನನಗೆ ಕಲಿಸಿದ ಗುರುಗಳೊಂದಿಗೆ ನಾನು ಗುರುವಾಗಿರುವುದು ನಿಜಕ್ಕೂ ನನ್ನ ಪುಣ್ಯ ಏಕೆಂದರೆ ನಾನಿನ್ನು ವಿದ್ಯಾರ್ಥಿಯಾಗಿದ್ದೇನೆ. ತಪ್ಪಾದರೆ ತಿದ್ದುವುದಕ್ಕೆ ನನ್ನ ಗುರುಗಳಿದ್ದಾರೆ.. ಹರ ಮುನಿದರು ಗುರು ಮುನಿಯಲಾರ.. ಅಂತಹ ನಾಡಿನ ಶಿಕ್ಷಕರಿಗೆಲ್ಲ ನನ್ನ ಅನಂತ ನಮನಗಳು...

■ ಸುಷ್ಮಾ ಪವಾರ ವಿಜಯಪುರ

Scanned with CamScanner